**ಕರ್ನಾಟಕ ಸರ್ಕಾರ**
**ಪಂಚಾಯತ್ ರಾಜ್ ಆಯುಕ್ತಾಲಯ**
**ಕಾಳಿದಾಸ ರಸ್ತೆ, ಗಾಂಧಿನಗರ, ಬೆಂಗಳೂರು – 560 009.**

ಸಂಖ್ಯೆ:ಕಪಂರಾಆ/ಅಭಿವೃದ್ಧಿ/93/2021 ದಿನಾಂಕ:04.11.2021

## ಅಧಿಕೃತ ಜ್ಞಾಪನ

**ವಿಷಯ:** **ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ಶಾಖೆಗಳ ಕಾರ್ಯಭಾರವನ್ನು ಮರು ಹಂಚಿಕೆ ಮಾಡಿ ಕಚೇರಿ ಕಾರ್ಯಗಳ ಸುಗಮ ನಿರ್ವಹಣೆ ಬಗ್ಗೆ.**

**ಉಲ್ಲೇಖ:** **ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ ಅಧಿಸೂಚನೆ ಸಂಖ್ಯೆ:ಕಪಂರಾಆ/ಸಿಎಸ್ಎಮ್/12/2020 ದಿ:07.09.2020.**

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದಲ್ಲಿ ಅಭಿವೃದ್ಧಿ ಶಾಖೆ, ಆಡಳಿತ, ಆಡಳಿತ-1 ಮತ್ತು ಆಡಳಿತ-2 ಶಾಖೆಗಳಂತೆ ಒಟ್ಟು 4 ಶಾಖೆಗಳು ಕಾರ್ಯನಿರ್ವಹಿಸುತ್ತಿರುವುದು ಸರಿಯಷ್ಟೆ. ಉಲ್ಲೇಖ(1)ರಲ್ಲಿ ಎಲ್ಲಾ ಶಾಖೆಗಳ ಕಾರ್ಯಭಾರ ಹಂಚಿಕೆ ಮಾಡಿ ಆದೇಶಿಸಲಾಗಿದೆ. ಮುಂದುವರೆದು, ಶಾಖೆಗಳ ನಡುವೆ ಸಮನ್ವಯತೆ, ಮತ್ತು ಸಂಬಂಧಪಡದ ವಿಷಯಗಳ ವರ್ಗಾವಣೆ ತಡೆಗಟ್ಟುವಿಕೆ ಆಡಳಿತದ ಹಿತದೃಷ್ಟಿಯಿಂದ, ವಿವಿಧ ಶಾಖೆಗಳ ನಡುವಿನ ವಿಷಯಗಳ ಪರಿಣಾಮಕಾರಿ ನಿರ್ವಹಣೆಗೆ ಕರಾರುವಕ್ಕಾದ ವಿಷಯ ವಿಂಗಡಣೆ ಅಗತ್ಯವಿರುತ್ತದೆ. ಅದರಂತೆ, ಕೆಳಕಂಡ ಕಾರ್ಯಭಾರವನ್ನು ಪ್ರತಿ ಶಾಖೆಗಳಿಗೆ ಸಮಾನವಾಗಿ ಕಾರ್ಯಹಂಚಿಕೆ ಮಾಡಲಾಗಿದ್ದು, ಅದರಂತೆ ತ್ವರಿತವಾಗಿ ಕ್ರಮವಹಿಸಲು ಆದೇಶಿಸಿದೆ.

| **1** | **ಕೃಷಿ ಮತ್ತು ಕೈಗಾರಿಕಾ ಇಲಾಖೆಗಳು ಹಾಗೂ ಅವುಗಳಡಿ ಬರುವ ನಿಗಮ/ಮಂಡಲಿ ಇತ್ಯಾದಿ ವಿಷಯಗಳು** | | |
|---|---|---|---|
| | ನಿರ್ದೇಶಕರು(ಆಡಳಿತ-1) ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ | 1 | ಕೃಷಿ ಇಲಾಖೆ |
| | | 2 | ಜಿಲ್ಲಾ ಜಲಾನಯನ ಅಭಿವೃದ್ಧಿ ಇಲಾಖೆ |
| | | 3 | ತೋಟಗಾರಿಕೆ ಇಲಾಖೆ |
| | | 4 | ಪಶುಪಾಲನೆ ಮತ್ತು ಪಶು ಸಂಗೋಪನಾ ಇಲಾಖೆ |
| | | 5 | ರೇಷ್ಮೆ ಇಲಾಖೆ |
| | | 6 | ಮೀನುಗಾರಿಕೆ ಇಲಾಖೆ |
| | | 7 | ಸಾಮಾಜಿಕ ಅರಣ್ಯ ಇಲಾಖೆ |
| | | 8 | ಖಾದಿ ಮತ್ತು ಗ್ರಾಮೋದ್ಯೋಗ ಇಲಾಖೆ |
| | | 9 | ಜವಳಿ ಮತ್ತು ಕೈಮಗ್ಗ ಇಲಾಖೆ |
| | | 10 | ಗಣಿ ಮತ್ತು ಭೂ ವಿಜ್ಞಾನ ಇಲಾಖೆ(ಅಂತರ್ಜಲ) |
| | | 11 | ಕೃಷಿ ಮಾರುಕಟ್ಟೆ ಸಮಿತಿ |
| | | 12 | ಸಹಕಾರ ಇಲಾಖೆ |
| | | 13 | ಉದ್ಯೋಗ ಮತ್ತು ತರಬೇತಿ (ಕಾರ್ಮಿಕ ಇಲಾಖೆ) |
| | | 14 | ಹಲವು ಯೋಜನೆಗಳಲ್ಲಿ ಅವ್ಯವಹಾರ ಕುರಿತು |
| | | 15 | ಪ್ರಾದೇಶಿಕ ಆಯುಕ್ತರುಗಳಿಂದ ಬರುವ ಗ್ರಾ. ಪಂ. ಅಧ್ಯಕ್ಷರ ಸದಸ್ಯರುಗಳ ವಜಾ ಕುರಿತು ಬರುವ ಪ್ರಸ್ತಾವನೆ/ನ್ಯಾಯಾಲಯ ಪ್ರಕರಣಗಳು. **(ಹಾಲಿ ನಿರ್ವಹಿಸುತ್ತಿರುವ ವಿಷಯಗಳ ಜೊತೆಗೆ )** |

| | | | |
|---|---|---|---|
| **2** | **ಸಾಮಾಜಿಕ ನ್ಯಾಯ ಇಲಾಖೆಗಳು ಹಾಗೂ ಅವುಗಳಡಿ ಬರುವ ನಿಗಮ/ಮಂಡಲಿ ಇತ್ಯಾದಿ ವಿಷಯಗಳು** | | |
| | ನಿರ್ದೇಶಕರು(ಆಡಳಿತ-2)<br>ಕರ್ನಾಟಕ ಪಂಚಾಯತ್ ರಾಜ್<br>ಆಯುಕ್ತಾಲಯ | 1 | ಜಿಲ್ಲಾ ಸಮಾಜ ಕಲ್ಯಾಣ |
| | | 2 | ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಅಭಿವೃದ್ಧಿ ಇಲಾಖೆ. |
| | | 3 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ |
| | | 4 | ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ |
| | | 5 | ಅಂಗವಿಕಲರ ಮತ್ತು ಹಿರಿಯ ನಾಗರೀಕರ ಅಭಿವೃದ್ಧಿ ಇಲಾಖೆ |
| | | 6 | ಆಹಾರ ಮತ್ತು ನಾಗರೀಕ ಸೇವಾ ಇಲಾಖೆ |
| | | 7 | ಡಾ:ಅಂಬೇಡ್ಕರ್ ಅಭಿವೃದ್ಧಿ ನಿಗಮ |
| | | 8 | ಡಿ.ದೇವರಾಜ್ ಅರಸ್ ಅಭಿವೃದ್ಧಿ ನಿಗಮ |
| | | 9 | ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ |
| | | 10 | ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ |
| | | 11 | ಹಲವು ಯೋಜನೆಗಳಲ್ಲಿ ಅವ್ಯವಹಾರ ಕುರಿತು |
| | | 12 | ಪ್ರಾದೇಶಿಕ ಆಯುಕ್ತರುಗಳಿಂದ ಬರುವ ಗ್ರಾ. ಪಂ. ಅಧ್ಯಕ್ಷರ ಸದಸ್ಯರುಗಳ ವಜಾ ಕುರಿತು ಬರುವ ಪ್ರಸ್ತಾವನೆ/ನ್ಯಾಯಾಲಯ ಪ್ರಕರಣಗಳು<br>**(ಹಾಲಿ ನಿರ್ವಹಿಸುತ್ತಿರುವ ವಿಷಯಗಳ ಜೊತೆಗೆ )** |
| **3** | **ಶಿಕ್ಷಣ ಮತ್ತು ಆರೋಗ್ಯ ಇಲಾಖೆಗಳು ಹಾಗೂ ಅವುಗಳಡಿ ಬರುವ ನಿಗಮ/ಮಂಡಲಿ ಇತ್ಯಾದಿ ವಿಷಯಗಳು** | | |
| | ನಿರ್ದೇಶಕರು(ಅಭಿವೃದ್ಧಿ)<br>ಕರ್ನಾಟಕ ಪಂಚಾಯತ್ ರಾಜ್<br>ಆಯುಕ್ತಾಲಯ | 1 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ |
| | | 2 | ಸಾರ್ವಜನಿಕ ಶಿಕ್ಷಣ ಇಲಾಖೆ |
| | | 3 | ವಯಸ್ಕರ ಶಿಕ್ಷಣ ಇಲಾಖೆ |
| | | 4 | ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ |
| | | 5 | ಆಯುಷ್ ಇಲಾಖೆ |
| | | 6 | ಗ್ರಂಥಾಲಯ ಇಲಾಖೆ |
| | | 7 | ಇ-ಸ್ವತ್ತು ಮಾಹಿತಿ |
| | | 8 | ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ |
| | | 9 | ಮೊಬೈಲ್ ಟವರ್‌ಗಳಿಗೆ ಸಂಬಂಧಿಸಿದ ಆಡಳಿತಾತ್ಮಕ ವಿಷಯಗಳು (ಟೆಲಿಕಾಂ)<br>**(ಹಾಲಿ ನಿರ್ವಹಿಸುತ್ತಿರುವ ವಿಷಯಗಳ ಜೊತೆಗೆ )** |
| **4** | **ಸಾಮಾನ್ಯ ಮತ್ತು ಸಮನ್ವಯ ಇಲಾಖೆಗಳು ಹಾಗೂ ಅವುಗಳಡಿ ಬರುವ ನಿಗಮ/ಮಂಡಲಿ ಇತ್ಯಾದಿ ವಿಷಯಗಳು** | | |
| | ಉಪ ಕಾರ್ಯದರ್ಶಿ (ಆಡಳಿತ)<br>ಕರ್ನಾಟಕ ಪಂಚಾಯತ್ ರಾಜ್<br>ಆಯುಕ್ತಾಲಯ | 1 | ರಾಜೀವ್ ಗಾಂಧಿ ವಸತಿ ನಿಗಮ |
| | | 2 | ನಿರ್ಮಿತಿ ಕೇಂದ್ರ |
| | | 3 | ಕರ್ನಾಟಕ ಭೂಸೇನಾ ನಿಗಮ |
| | | 4 | ಸಾಂಖ್ಯಿಕ ಇಲಾಖೆ |
| | | 5 | ಕನ್ನಡ ಮತ್ತು ಸಂಸ್ಕೃತಿ ಇಲಾಖೆ |
| | | 6 | ಸಮನ್ವಯ ವಿಷಯಗಳು<br>**(ಹಾಲಿ ನಿರ್ವಹಿಸುತ್ತಿರುವ ವಿಷಯಗಳ ಜೊತೆಗೆ )** |

ಈ ಮೇಲಿನಂತೆ ಹಂಚಿಕೆ ಮಾಡಲಾದ ಇಲಾಖಾವಾರು ವಿಷಯಗಳು ಹಾಗೂ ಸ್ವೀಕೃತವಾದ ಪತ್ರಗಳನ್ನು ಆಯಾ ಶಾಖೆಗಳಲ್ಲಿ ನಿರ್ವಹಿಸಲು ಹಾಗೂ ಸದರಿ ವಿಷಯಗಳಿಗೆ ಸಂಬಂಧಿಸಿದಂತೆ ಸರ್ಕಾರ/ಆಯುಕ್ತಾಲಯದಿಂದ ಮಾಹಿತಿಯನ್ನು ಕೋರಿದಾಗ ಆಯಾ ವಿಭಾಗದ ನಿರ್ದೇಶಕರು ಮಾಹಿತಿಯನ್ನು ಸಂಬಂಧಿಸಿದ ಇಲಾಖೆಗೆ ಒದಗಿಸಲು ಈ ಮೂಲಕ ಸೂಚಿಸಿದೆ. ಆಯುಕ್ತಾಲಯದ ಎಲ್ಲಾ ಶಾಖೆಗಳು ಪರಸ್ಪರ ಸಮನ್ವಯದೊಂದಿಗೆ ಕಡತಗಳನ್ನು ಮತ್ತು ಸ್ವೀಕೃತಿಗಳನ್ನು ಕಾಲ ಕಾಲಕ್ಕೆ ವಿಲೇ ಮಾಡಲು ಈ ಮೂಲಕ ನಿರ್ದೇಶಿಸಿದೆ.

4/11/24

ಆಯುಕ್ತರು,
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
ಬೆಂಗಳೂರು.

**<u>ಇವರಿಗೆ,</u>**

1. ನಿರ್ದೇಶಕರು, ಆಡಳಿತ(1) ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.
2. ನಿರ್ದೇಶಕರು, ಆಡಳಿತ(2) ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು
3. ನಿರ್ದೇಶಕರು, (ಅಭಿವೃದ್ಧಿ), ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು
4. ಉಪ ಕಾರ್ಯದರ್ಶಿ (ಆಡಳಿತ), ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು
5. ಎಲ್ಲಾ ಉಪ ನಿರ್ದೇಶಕರುಗಳಿಗೆ, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು

**<u>ಪ್ರತಿಯನ್ನು ಮಾಹಿತಿಗಾಗಿ:</u>**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ರವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ ಬೆಂಗಳೂರು.
2. ಆಯುಕ್ತರು, ಇವರ ಆಪ್ತ ಸಹಾಯಕರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.
3. ಕಛೇರಿ ಪ್ರತಿ.